# ನಾಂದಿಪದ

ನಾವು ನೋಡಿದ ಊರು, ವ್ಯಕ್ತಿ, ಮನೆ, ವಸ್ತು ಹೀಗೆ ಯಾವುದರ ಬಗ್ಗೆಯಾದರೂ ನಮ್ಮದೇ ಆದ ಚಿತ್ರವೊಂದು ಮನಸ್ಸಿನಲ್ಲಿ ಉಳಿದಿರುತ್ತದೆ. ಹಾಗೆ ನಮ್ಮ ಭಾವಕೋಶದಲ್ಲಿ ಅಚ್ಚಾದ ಚಿತ್ರಗಳು ಆಗಾಗ ಬದಲಾಗುತ್ತ ಇರುತ್ತವೆಯಾದರೂ ಕೆಲವು ಮೂಲಪ್ರತಿಮೆಗಳು ಬದಲಾಗುವ ಸಂಭವ ಕಡಿಮೆ. ನಮ್ಮ ಲೋಕಪ್ರಿಯ ವ್ಯಕ್ತಿಗಳ ಚಿತ್ರಗಳನ್ನೇ ತೆಗೆದುಕೊಳ್ಳಿ. ಬೋಳು ತಲೆಯ, ಧೋತರ ಉಟ್ಟ, ಬೊಚ್ಚು ಬಾಯಿಯ ಅಜ್ಜನಾಗಿ ಬಾಪು, ಪುಸ್ತಕ ಹಿಡಿದ ಸೂಟುಧಾರಿ ಅಂಬೇಡ್ಕರ್ ಅನೇಕರ ಮನದಲ್ಲಿ ಉಳಿದಿರಲು ಸಾಕು. ನೆಹರೂ ಎಂದರೆ ಗುಲಾಬಿ ಹೂ, ಐಶ್ವರ್ಯ ರೈ ಎಂದರೆ ಸದಾಸುಂದರಿ... ಅವರ ಹುಟ್ಟಿನಿಂದಲೂ ಹಾಗೆಯೇ ಇದ್ದರು ಎಂಬಂತೆ ಅವರ ಚಿತ್ರಗಳಿರುತ್ತವೆ. ದೇವರ ವಿಷಯಕ್ಕೆ ಬಂದರೆ, ರಾಜಾ ರವಿವರ್ಮನ ಕಲಾಕೃತಿಗಳ, ಕ್ಯಾಲೆಂಡರ್‌ಗಳ ರೂಪಗಳೇ ಕಣ್ಣಮುಂದೆ ಬರುತ್ತವೆ. ಕಿರೀಟಹೊತ್ತ, ಮಿರುಗುವ ಒಡವೆ ಹಾಕಿದ, ಶುಭ್ರ ವಸನಧಾರಿಯಾದ ದೇವರ ಚಿತ್ರಗಳು ಮನದಿಂದ ಸರಿಯಲು ಸಾಧ್ಯವಾಗಿಲ್ಲ. ಹಾಗೆ ಬಹುಕಾಲದಿಂದ ಭಾರವಾದ ವಸ್ತುಗಳನ್ನು ಮೈಮೇಲೆ ಹೇರಿಕೊಂಡು, ಕೂತಲ್ಲೇ ಕೂತಿದ್ದು ದೇವರಿಗೆ ಬೇಸರವಾಗಿದ್ದರೂ ನಮ್ಮಲ್ಲಿರುವ ಆ ಬಿಂಬಗಳಿಗೆ ತುಸುವೂ ದಣಿವಾದಂತಿಲ್ಲ.



ದೈನಿಕದಲ್ಲಿ ನಮ್ಮ ಸಂಪರ್ಕಕ್ಕೆ ಬರುವ ವ್ಯಕ್ತಿಗಳ ಬಗ್ಗೆ ಒಂದು ಅಭಿಪ್ರಾಯ ನಮ್ಮಲ್ಲಿ ರೂಪುಗೊಂಡಿರುತ್ತದೆ. ಅವರ ನಡಿಗೆ, ಮಾತನಾಡುವ ಶೈಲಿ, ಧ್ವನಿ, ಕಣ್ಣ ಹೊಳಪು ನಮ್ಮಲ್ಲಿ ನಿಂತಿರುತ್ತದೆ. ಒಬ್ಬಾತ ಒಳ್ಳೆಯವ, ಕೆಟ್ಟವ ಎಂಬ ನಮ್ಮದೇ ಅಭಿಪ್ರಾಯ ಇಟ್ಟುಕೊಂಡಿರುತ್ತೇವೆ. ಅದೊಂದು ನಂಬಿಕೆ; ಬದಲಾಗಿ ಸತ್ಯ ಅಲ್ಲ. ಮರ ಎಂಬುದು ಭಾಷೆಯಲ್ಲಿ ಧ್ವನಿ ಸಂಕೇತವಷ್ಟೆ ಹೊರತು ಅದು ಮರವೇ ಅಲ್ಲದಿರಬಹುದು. ನಮ್ಮ ಯಾವುದೇ ಪ್ರತಿಮೆಗಳು ಕೊಂಚವೇ ಭಗ್ನಗೊಂಡರೂ ನಮ್ಮ ನಂಬಿಕೆಯ ಬುಡ ಅಲ್ಲಾಡುತ್ತದೆ. ವಿಗ್ರಹ ಭಂಜಕತೆ ಹಲವರಿಗೆ ಒಪ್ಪಿಕೊಳ್ಳಲು ಆಗದ ಸಂಗತಿ. ಜನರಲ್ಲಿ ವ್ಯಕ್ತಿ ಇಲ್ಲವೇ ಪ್ರತಿಮಾ ನಿಷ್ಠೆ ಎಷ್ಟಿರುತ್ತದೆ ಎಂದರೆ ಅವಕ್ಕೆ ಹೆಚ್ಚುಕಡಿಮೆ ಆಗುವಂತಿಲ್ಲ. ನಮ್ಮಲ್ಲಿ ಭಿನ್ನಗೊಂಡ ದೇವರ ಪ್ರತಿಮೆಗೆ ಪೂಜೆ ಸಲ್ಲುವುದಿಲ್ಲ.

ನಮ್ಮ ಬಗ್ಗೆ ನಮ್ಮದೇ ಕಲ್ಪನೆಯೊಂದಿರುತ್ತದೆ. ನಾನು ಬುದ್ಧಿವಂತ, ದಕ್ಷ, ಪ್ರತಿಭಾವಂತ, ಪ್ರಾಮಾಣಿಕ, ತರಳೆಯರನ್ನು ಸೆಳೆಯಬಲ್ಲ ಚದುರ, ಸಮ್ಮೋಹಕ ವ್ಯಕ್ತಿತ್ವದವ ಇತ್ಯಾದಿಯಾಗಿ ನಮ್ಮ ಚಿತ್ರವನ್ನು ನಮ್ಮೊಳಗೆ ಬರೆದುಕೊಂಡಿರುತ್ತೇವೆ. ಅದಕ್ಕೆ ಹೊಡೆತ ಬಿದ್ದರಂತೂ ಇಡೀ ವ್ಯಕ್ತಿತ್ವವೇ ನಾಶವಾಗುವ ಸಂಭವವಿರುತ್ತದೆ. ನಾವು ಬರೆದುಕೊಂಡಿರುವ ಬಹುಪಾಲು ಚಿತ್ರಗಳು ಸುಳ್ಳು. ಅದಿಲ್ಲದೆ ಬದುಕನ್ನು ಸಾಗಿಸುವುದು ಸಹ ಕಷ್ಟ. ಸಿನಿಮಾ ನಾಯಕರಂತೂ ತಮ್ಮದೇ ಇಮೇಜ್ ಒಂದನ್ನು ಅಭಿಮಾನಿಗಳಲ್ಲಿ ಸೃಷ್ಟಿಸಿರುತ್ತಾರೆ. ಆ ಭ್ರಮೆಗಳ ನಾಮಬಲದ ಮೇಲೆ ಅವರ ಸಿನಿಮಾಗಳ ಕತೆ, ಯಶಸ್ಸು ನಿಂತಿರುತ್ತದೆ. ಅದರ ಬಲೆಯಲ್ಲಿ ಸಿಕ್ಕು ಒದ್ದಾಡಿದ ನಟ, ನಟಿಯರು ಅನೇಕರಿದ್ದಾರೆ. ರಾಜಕೀಯದಲ್ಲಿ ಇದು ಬೇರೆ. ತಮ್ಮ ಖಾದಿ ಅಂಗಿಯ ಮೇಲೆ ಜನರ ಹತ್ಯಾಕಾಂಡದ ರಕ್ತ ಅಂಟಿದ್ದರೂ 'ಕ್ಲೀನ್ ಇಮೇಜ್'ನಲ್ಲಿ ಚುನಾವಣೆ ಗೆದ್ದ ರಾಜಕಾರಣಿಗಳಿದ್ದಾರೆ. ಒಳಿತು– ಕೆಡುಕು, ಸುಳ್ಳು– ನಿಜ, ನೀತಿ–ಅನೀತಿಯ ದ್ವಂದ್ವ ಇಲ್ಲಿ ಲೆಕ್ಕಕ್ಕೇ ಬರುವುದಿಲ್ಲ. ಈ ದ್ವಂದ್ವದ ಮೂಲ ಮುದ್ದೆಗೆ ಕೈಹಾಕುವುದು ಸಾಹಿತ್ಯ ಮಾತ್ರ. ಮೂಲ ಪ್ರತಿಮೆಗಳನ್ನು ಒಡೆಯುವುದು ಕೂಡ ಸಾಹಿತ್ಯವೇ. ಅದೇ ಅದರ ನಿಜವಾದ ಗುರಿ, ದಾರಿ. ಅನಾದಿಯ ಪರಿಚಿತ ಪ್ರತಿಮೆಗಳನ್ನು ಕೆಡವಿ ಇಲ್ಲವೇ ಕೊಡವಿ ಬೇರೆ ಬಗೆಯಲ್ಲಿ ಬದುಕು, ಜಗತ್ತನ್ನು ಕಾಣಿಸುವ ಬರವಣಿಗೆ ಹೊಸದೇ ಕಣ್ಣುಗಳನ್ನು ಕೊಡುತ್ತದೆ. ಅಂತಹ ದೃಷ್ಟಿಯನ್ನು ಕೊಡುವ ಸಾಹಿತ್ಯ ಎಲ್ಲ ಕಾಲದ, ಅದರಲ್ಲೂ ಈಗಿನ ಅಗತ್ಯವಾಗಿದೆ.

**ಸಂದೀಪ ನಾಯಕ**